# ತಂದೆಯವರು ಸ್ವರ್ಗಸ್ಥರಾದರಾ?

■ ಜಿ.ವಿ. ಗಣೇಶಯ್ಯ



'ನೋಡಿದ್ಯಾ ರಾಮಣ್ಣ ಈ ವಿಚಿತ್ರಾನ?' ಅಂತ ಅಚ್ಚರಿ ಸೂಚಕ ಮುಖಭಾವವನ್ನು ಪ್ರದರ್ಶಿಸುತ್ತಾ ಒಂದು ವೈಕುಂಠ ಸಮಾರಾಧನೆಯ ಆಹ್ವಾನ ಪತ್ರಿಕೆಯನ್ನು ತೋರಿಸಿದ ಶಂಭು.

ನಾನು ಅವನ ಕೈಯಿಂದ ಕಾರ್ಡು ತೆಗೆದುಕೊಂಡು ಒಂದಲ್ಲ ಮೂರು ಸಾರಿ ಓದಿದೆ. ದೃಷ್ಟಿದೋಷವಿಲ್ಲದಿದ್ದರೂ ನನ್ನ ಕಣ್ಣಿಗೆ ಅಂತಹ ವಿಚಿತ್ರವೇನೂ ಕಂಡುಬರಲಿಲ್ಲ.

'ಏನು ವಿಚಿತ್ರ ಕಂಡೆ ಮಾರಾಯ ಈ ಕಾರ್ಡಿನಲ್ಲಿ? ನನಗಂತೂ ವಿಚಿತ್ರವಾದ್ದೇನೂ ಕಾಣ್ತಾಯಿಲ್ಲಪ್ಪ' ಅಂತ ಅಚ್ಚರಿ ಮಿಶ್ರಿತ ಸ್ವರದಲ್ಲಿ ಕೇಳಿದೆ.

ನನ್ನ ಕೈಯಿಂದ ಕಾರ್ಡ್ ತೆಗೆದುಕೊಂಡು ಅವನು ಒಂದು ಸಾಲು ತೋರಿಸಿ 'ಓದು ಇದನ್ನು' ಅಂದ.

ಓದಿದೆ: 'ನನ್ನ ತಂದೆಯವರಾದ ಸುಬ್ಬಣ್ಣನವರು ದಿನಾಂಕ 16–08–2017 ರಂದು ಸ್ವರ್ಗಸ್ಥರಾದರೆಂದು ತಿಳಿಸಲು ದುಃಖವಾಗುತ್ತದೆ' ಇದು ಆ ಸಾಲಿನ ಒಕ್ಕಣೆ.

'ಇದರಲ್ಲಿ ಏನಯ್ಯಾ ಅಂಥಾ ವಿಚಿತ್ರ? ಆತನ ತಂದೆ ತೀರಿಕೊಂಡಿದ್ದಾರೆ, ಅದನ್ನು ತಿಳಿಸಲು ದುಃಖ ಆಗ್ತಿದೆ ಅಂತ ಇದೆ..'

'ರಾಮಣ್ಣಾ, ಈಗೊಂದು ಪ್ರಶ್ನೆ ಕೇಳ್ತೀನಿ, ಸರಿಯಾಗಿ ಉತ್ತರ ಹೇಳು. ಸ್ವರ್ಗ ಒಳ್ಳೇದೋ ನರಕ ಒಳ್ಳೇದೋ?' ಅಂತ ಕೇಳಿದ ಶಂಭು.

'ಇದೆಂಥಾ ಘನಂದಾರಿ ಪ್ರಶ್ನೆ? ಸ್ವರ್ಗಾನೇ ಒಳ್ಳೇದು. ನರಕಾನ ಒಳ್ಳೇದು ಅನ್ನೋಕಾಗುತ್ತಾ?'

'ಹೌದಲ್ಲ? ಅಂದ ಮೇಲೆ ಹೋಗೋದಾದ್ರೆ ಸ್ವರ್ಗಕ್ಕೇ ಹೋಗಬೇಕು ಅಲ್ವಾ? ಯಾಕೇಂದ್ರೆ ಅದೇ ಒಳ್ಳೇದು ನೋಡು. ಆದ್ರೆ ನರಕಕ್ಕೆ ಮಾತ್ರ ಹೋಗಲೇಬಾರ್ದು, ಏಕೆಂದ್ರೆ ಅದು ಕೆಟ್ಟದ್ದು, ಹೌದೋ ಅಲ್ವೋ?'

'ಅರೆ, ಹೌದು ಮಾರಾಯಾ. ಒಳ್ಳೇ ಜಾಗಕ್ಕೆ ಹೋಗೋದನ್ನ ಒಳ್ಳೇದಲ್ಲ ಅಂತ ಯಾವ ಮುಟ್ಠಾಳ ಹೇಳ್ತಾನೆ?'

'ಅಂದ ಮೇಲೆ ಸ್ವರ್ಗಕ್ಕೆ ಹೋದ್ರೆ ಸಂತೋಷ ಪಡ್ಬೇಕು, ದುಃಖ ಪಡೋದು ಸರಿಯಲ್ಲ ಅಲ್ಲವಾ?'

'ನೀನು ಹೇಳೋದು ಸರಿ ಶಂಭು. ಒಬ್ಬ ಸ್ವರ್ಗಕ್ಕೆ ಹೋಗಿ ಅಲ್ಲಿ ಸ್ವರ್ಗ ಸುಖ ಅನುಭವಿಸಿಕೊಂಡು ಸುಖವಾಗಿ ಇರ್‍ತಾನೆ ಅಂತಂದ್ರೆ ಅದಕ್ಕಿಂತ ಸಂತೋಷದ ಸಂಗತಿ ಇನ್ಯಾವುದಿದೆ ಹೇಳು!'

'ಹಾಗಾದ್ರೆ, ಈ ಕಾರ್ಡಿನ ಪ್ರಕಾರ ತಂದೆಯವರು ಸ್ವರ್ಗಸ್ಥರಾದುದಕ್ಕೆ ಮಗ ದುಃಖವಾಗ್ತಿದೆ ಅಂತಾನಲ್ಲ. ಅದು ಯಾಕೆ? ವಾಸ್ತವವಾಗಿ ತಂದೆ ಸ್ವರ್ಗಕ್ಕೆ ಹೋದ ಅಂತ ಸಂತೋಷ ಪಡಬೇಕಲ್ವಾ?'

ಶಂಭುವಿನ ವಾದ ಸರಿ ಅನ್ನಿಸ್ತು ನನಗೆ. ಹೌದು. ಅಪ್ಪ ನರಕಕ್ಕೆ ಹೋದ್ರೆ ದುಃಖ ಪಡೋದ್ರಲ್ಲಿ ಅರ್ಥವಿದೆ. ಆದ್ರೆ ಅವನು ಸ್ವರ್ಗಕ್ಕೆ ಹೋದ್ರೂ ಯಾಕೆ ದುಃಖ ಪಡಬೇಕು? ಆದರೂ ಒಂದು ಅನುಮಾನ ನನ್ನನ್ನು ಕಾಡಿತು:

'ಶಂಭೂ, ಸ್ವರ್ಗಕ್ಕೆ ಹೋಗಬೇಕೂಂದ್ರೆ ಮೊದ್ಲು ವ್ಯಕ್ತಿ ಸಾಯಬೇಕಲ್ವಾ? ಅಷ್ಟಕ್ಕೂ ಸಾವನ್ನು ಯಾರಾದ್ರೂ ಸಂಭ್ರಮಿಸ್ತಾರಾ ಹೇಳು? ಯಾರಾದ್ರೂ ಸತ್ತರೆ ಸಂತೋಷವಾಗ್ತದಾ? ದುಷ್ಟ, ದುರುಳರು ಸತ್ತರೆ ಜನ ಸಂಭ್ರಮಿಸಿ ಪಟಾಕಿ ಸಿಡಿಸಿಯಾರು. ಸತ್ತ ನಂತರ ಒಂದು ಸಮಸ್ಯೆಯಿದೆ ನೋಡು. ಸತ್ತ ವ್ಯಕ್ತಿ ಸ್ವರ್ಗಕ್ಕೆ ಹೋದ ಅಂತ ನಂಬುವುದು ಹೇಗೆ? ಅವನು ನರಕಕ್ಕೂ ಹೋಗಿರಬಹುದಲ್ಲವೇ? ಆಗಲೂ ಜನ ಸ್ವರ್ಗಸ್ಥನಾದ ಅಂತ ಸುಳ್ಳೇ ಹೇಳ್ತಾರಲ್ಲ?'– ನನ್ನ ಅನುಮಾನವನ್ನು ವ್ಯಕ್ತಪಡಿಸಿದೆ.

'ನೀನು ಹೇಳೋದೂ ಒಂದು ರೀತಿಯಲ್ಲಿ ಸರಿಯಿದೆ ರಾಮಣ್ಣಾ. ಸತ್ತವನು ಸ್ವರ್ಗಕ್ಕೇ ಹೋಗಿದ್ದಾನೆ ಅಂತೇನೂ ಖಾತ್ರಿಯಿಲ್ಲ. ಅಕಸ್ಮಾತ್ ಅವನು ಸಾಯುವಾಗ ಮೊಬೈಲ್ ಫೋನ್ ಜೊತೆಗೆ ಒಯ್ದರೂ ಅವನು ನಾಟ್ ರೀಚಬಲ್. ವ್ಯಾಪ್ತಿಯ ಪ್ರದೇಶದಿಂದ ಬಹಳ ದೂರ ಹೋಗಿಯಾಗಿರುತ್ತದೆ! ಹಾಗಾಗಿ ಅವನು ಸತ್ತಮೇಲೆ ಎಲ್ಲಿಗೆ ಹೋದ ಅಂತ ಟ್ರೇಸ್ ಮಾಡುವುದೇ ಕಷ್ಟ. ಅವನು ಸ್ವರ್ಗಕ್ಕೂ ಹೋಗದೆ, ನರಕಕ್ಕೂ ಹೋಗದೆ, ದಾರಿ ತಪ್ಪಿ ಮಧ್ಯದಲ್ಲೆಲ್ಲೋ ಅಂತರಪಿಶಾಚಿಯಾಗಿ ಅಲೆಯುತ್ತಲೂ ಇರಬಹುದಲ್ಲವೇ? ಅಷ್ಟೇ ಅಲ್ಲ, ಸ್ವರ್ಗಕ್ಕೆ ಹೋಗುವ ಎಲಿಜಿಬಿಲಿಟಿ ಸತ್ತವನಿಗೆ ಇದೆಯಾ ಎಂಬ ಪ್ರಶ್ನೆಯೂ ಇಲ್ಲಿ ಬರುತ್ತದೆ!'

'ನಿನ್ನ ಮಾತು ನಿಜ ಶಂಭು. ಆದರೆ ಅದನ್ನು ಕಂಡುಹಿಡಿಯುವುದಕ್ಕೆ ಈಗೊಂದು ಉಪಾಯ ಇದೆಯಲ್ಲ?'

'ಯಾವುದದು?'– ಕುತೂಹಲದಿಂದ ಕೇಳಿದ ಶಂಬು.

'ಟಿವಿ ವಾಹಿನಿಗಳಲ್ಲಿ ಆಗಾಗ ಬರುತ್ತಿರುತ್ತಾರಲ್ಲ, ಜನ್ಮಾಂತರಗಳನ್ನು ಜಾಲಾಡುವ ಗುರೂಜಿಗಳು. ಅವರನ್ನು ಹಿಡಕೊಂಡು ಸತ್ತವ ಎಲ್ಲಿಗೆ ಹೋದ ಅಂತ ತಿಳಿದುಕೊಳ್ಳಬಹುದೇನೋ?'

ನನ್ನ ಮಾತಿಗೆ ಶಂಭು ನಗೆಯಾಡಿದ. 'ರಾಮಣ್ಣಾ, ಜೀವ ಇರುವ ವ್ಯಕ್ತಿಯನ್ನು ಸಮ್ಮೋಹಿನಿಗೆ ಒಳಪಡಿಸಿ ಅವನ ಬಾಯಿಂದ ಅವನ ಜನ್ಮಾಂತರಗಳನ್ನು ತಿಳಿಯುತ್ತಾರೆ. ಸತ್ತ ವ್ಯಕ್ತಿಯನ್ನು ಸಮ್ಮೋಹಿನಿಗೆ ಒಳಪಡಿಸಿ ಮಾತನಾಡಿಸಲು ಸಾಧ್ಯಾನಾ?'

'ಹೋಗಲಿ ಬಿಡು. ಈ ಗೊಂದಲಗಳೆಲ್ಲಾ ಬೇಡ. ನನಗೊಂದು ಉಪಾಯ ಹೊಳೀತಿದೆ. ಹಾಗೆ ಮಾಡಿದರೆ ಈ ಸಾವಿನ ಸಮಸ್ಯೆಗೆ ಪೂರ್ಣ ಪರಿಹಾರ ಸಿಗಬಹುದು' ಅಂದೆ ನಾನು.

'ಅದೆಂತಹ ಪರಿಹಾರ ಹೇಳು ನೋಡೋಣ'– ಕೇಳಿದ ಶಂಭು.

''ಈ ಎಲ್ಲ ರಗಳೆ– ರಾಮಾಯಣಗಳೇ ಬೇಡ. ವೈಕುಂಠ ಸಮಾರಾಧನೆಯ ಅಥವಾ ಶಿವಗಣಾರಾಧನೆಯ ಕಾರ್ಡಿನಲ್ಲಿ ಹೀಗೆ ಮುದ್ರಿಸಿದರಾಯಿತು: 'ನನ್ನ ತಂದೆಯವರು 16–7–2017 ರಂದು ಸ್ವರ್ಗ/ನರಕಸ್ಥರಾದರೆಂದು ತಿಳಿಸಲು ಸಂತಸ/ದುಃಖವಾಗುತ್ತಿದೆ.' ಹೀಗೆ ಮುದ್ರಿಸಿದರೆ ಸರಿಯಾಗ್ತದಲ್ವಾ? ಆಗ ಸತ್ತ ವ್ಯಕ್ತಿಯ ಬಗೆಗೆ ಅವರವರು ತಮ್ಮ ತಮ್ಮ ಅನಿಸಿಕೆಗಳಂತೆ ಸ್ವರ್ಗಕ್ಕೊ ನರಕಕ್ಕೋ, ಸಂತಸಕ್ಕೋ ದುಃಖಕ್ಕೋ ಟಿಕ್ ಮಾಡಿಕೊಂಡು ಓದಿಕೊಂಡರಾಯಿತು'' ಅಂತಂದೆ.

ಶಂಭು ತೆಪ್ಪಗಾದ! ●